# ಹಿಂದುಳಿದ ಬೀದರ ಜಿಲ್ಲೆಯ ಅಭಿವೃದ್ಧಿ ಎಂಬ ಅವನತಿ!

ಕರ್ನಾಟಕದ ಉತ್ತರದ ತುತ್ತತುದಿಯ ಜಿಲ್ಲೆ ಬೀದರ. ಹಿಂದುಳಿದ ಹೈದರಾಬಾದ ಕರ್ನಾಟಕದ ಬಾಗವಾಗಿರುವ ಈ ಜಿಲ್ಲೆ 12 ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕುಶಲಕರ್ಮಿ ಕಾಯಕಜೀವಿಗಳ ಚಳವಳಿಯ ಹುಟ್ಟೂರಾಗಿತ್ತು. ಜಾತ್ಯಾತೀತತೆ,ಸಮಾನತೆ, ಲಿಂಗಸಮಾನತೆ, ಪ್ರಜಾತಾಂತ್ರಿಕತೆಯನ್ನು ಪ್ರತಿಪಾದಿಸಿ ಅಂದು ಭಾರಿ ಪ್ರಬಲವಾಗಿದ್ದ ಊಳಿಗಮಾನ್ಯ ಚಿಂತನೆಗಳಿಗೆ ಸೆಡ್ಡು ಹೊಡೆದು ನಿಂತಿದ್ದ ಶರಣ ಚಳುವಳಿ ಈ ಜಿಲ್ಲೆಯಿಂದಲೇ ಕರ್ನಾಟಕದ ಇತರ ಬಾಗಗಳಿಗೆ ಹಾಗೂ ಪಕ್ಕದ ಆಂದ್ರಕ್ಕೆ ಹರಡಿತ್ತು.ಶಾತವಾಹನರು,ಕದಂಬರು,ಹೊಯ್ಸಳರು,ರಾಷ್ಟ್ರಕೂಟರು,ಕಾಕತೀಯರು,ಕಲಚೂರ್ಯರು, ಮೊಗಲರು,ಮೊಹಮದರು, ಬಹಮನಿ ಸುಲ್ತಾನರು ಮೊದಲಾದವರು ಈ ಪ್ರದೇಶವನ್ನು ಆಳಿದ್ದರು.ಶರಣ ಚಳವಳಿಯ ಕಾಲದ ಬಿಜ್ಜಳ ಕಲಚೂರ್ಯ ರಾಜ ಕುಟುಂಬಕ್ಕೆ ಸೇರಿದವನಾಗಿದ್ದ. 1948ರ ಬಾರತ ಸರ್ಕಾರದ ಕಾರ್ಯಾಚರಣೆಯವರೆಗೂ ಹೈದರಾಬಾದ ನಿಜಾಮನ ಆಡಳಿತಕ್ಕೆ ಈ ಬಾಗ ಒಳಪಟ್ಟಿತ್ತು. 1957 ರಲ್ಲಿ ಕರ್ನಾಟಕ ರಾಜ್ಯದ ಭಾಗವಾಯಿತು.

ಬೀದರ,ಹುಮನಾಬಾದ,ಭಾಲ್ಕಿ,ಬಸವಕಲ್ಯಾಣ,ಔರಾದ ಎಂಬ ಐದು ತಾಲೂಕುಗಳನ್ನು ಹೊಂದಿರುವ ಇದು ರಾಜ್ಯದ ಎರಡನೇ ಅತಿ ಚಿಕ್ಕ ಜಿಲ್ಲೆಯಾಗಿದೆ.ಈಗ ಹುಲಸೂರು,ಕಮಲನಗರ ಹಾಗೂ ಚಿಟಗುಪ್ಪಗಳನ್ನು ತಾಲೂಕುಗಳನ್ನಾಗಿ ಮಾಡಬೇಕೆಂಬ ಕೂಗು ಬಲವಾಗಿದೆ. ಒಟ್ಟು 599 ಹಳ್ಳಿಗಳಿವೆ. ಜಿಲ್ಲೆಯಲ್ಲೇ ಔರಾದ ಅತಿ ಹಿಂದುಳಿದ ತಾಲೂಕಾಗಿದೆ. ನಂತರದ ಸ್ಥಾನ ಭಾಲ್ಕಿ ತಾಲೂಕಿಗೆ ಇದೆ.2001ರ ಗಣತಿ ಪ್ರಕಾರ ಬೀದರ ಜಿಲ್ಲೆಯ ಜನಸಂಖ್ಯೆ ಹದಿನೈದು ಲಕ್ಷದ ಎರಡುಸಾವಿರದ ಮುನ್ನೂರ ಎಪ್ಪತ್ತಮೂರು. ಜನಸಾಂದ್ರತೆ ಒಂದು ಚದರ ಕೀ ಮೀ ಗೆ ಇನ್ನೂರ ಎಪ್ಪತ್ತಾರು. ನಗರ ಪ್ರದೇಶದಲ್ಲಿ ಜಿಲ್ಲೆಯ ಶೇಕಡಾ ಇಪ್ಪತ್ತಮೂರು ಜನರು ವಾಸವಾಗಿದ್ದಾರೆ.ಒಟ್ಟು ವಿಸ್ತೀರ್ಣ 5460.12 ಚದರ ಕಿ.ಮೀ ಗಳು. ಅತಿ ಬಡವರೆ ಹೆಚ್ಚಾಗಿ ಇಲ್ಲಿರುವುದು.

ಕಬ್ಬು,ಜೋಳ, ತೊಗರಿ,ಬತ್ತ, ಹೆಸರು,ಉದ್ದು,ಕಡಲೆ,ಶೇಂಗ, ಗೋದಿ,ಮೆಣಸುಗಳು ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಸರ್ಕಾರಿ ಪ್ರಾಯೋಜಿತ ರಾಸಾಯನಿಕ ಗೊಬ್ಬರ,ಕೀಟ ನಾಶಕಗಳ ಅವೈಜ್ಞಾನಿಕ ಬಳಕೆಯಿಂದಾಗಿ ಹಲವಾರು ಪ್ರದೇಶಗಳಲ್ಲಿ ಭೂಮಿಯ ಸಾರವತ್ತತೆ ನಾಶವಾಗಿದೆ. ಕೃಷಿ ಖರ್ಚಿನ ಬಾಬತ್ತು ವಿಪರೀತವಾಗಿ, ಸಾಲದ ಶೂಲದ ಚುಚ್ಚುವಿಕೆಯಿಂದಾಗಿ ಗುಂಡಿಗೆಗಳು ಒಡೆದು ರೈತರು ಆತ್ಮಹತ್ಯಾ ದಾರಿ ಹಿಡಿದಿದ್ದಾರೆ. ಹುಮನಾಬಾದ ಮತ್ತು ಬೀದರ ತಾಲುಕುಗಳಲ್ಲಿ

ಒಂದು ಮಟ್ಟಕ್ಕೆ ಹೈನುಗಾರಿಕೆ ಇದ್ದರೂ ಅದು ತೀವ್ರ ಮೇವು ಕೊರತೆ, ಚಕಿತ್ಸಾ ಸೌಲಭ್ಯ ಕೊರತೆ ಮೊದಲಾದ ಸಮಸ್ಯೆಗಳನ್ನು ಎದುರಿಸುತ್ತಿದೆ.

2006ರ ಅಂಕಿಅಂಶಗಳ ಪ್ರಕಾರ ವಾರ್ಷಿಕ ಸರಾಸರಿ ಕೇವಲ 724 ಮಿ.ಮೀ. ಮಳೆ ಆಗುವ ಈ ಜಿಲ್ಲೆಯಲ್ಲಿ  ಕೃಷ್ಣ ಹಾಗು ಗೋದಾವರಿ ಕೊಳ್ಳದ ಮಾಂಜ್ರಾ, ಕಾರಂಜಾ ಎಂಬ ಪ್ರಮುಖವಾದ ನದಿಗಳು ಹರಿಯುತ್ತವೆ. ಮುಲ್ಲಾಮಾರಿ, ಚುಳುಕಿನಾಲ ಎಂಬ ಇನ್ನೆರಡು ನದಿಗಳು ಕೂಡ ಇದೆ. ಸುಮಾರು 277 ಕಿ.ಮೀ ಗಳಷ್ಟು ದೂರ ನದಿಗಳ ನೀರು ಇಲ್ಲಿ ಹರಿಯುತ್ತದೆ. 2008ರಲ್ಲಿ ಬಂದ ಬೀದರ ಒಂದು ನೋಟ ಎಂಬ ವರದಿಯ ಸರ್ಕಾರಿ ಅಂಕಿ ಅಂಶಗಳ ಪ್ರಕಾರ 8789 ಚದುರ ಕಿ.ಮಿ  ಕೃಷಿ ಮಾಡುವ ಪ್ರದೇಶ  ಆಗಿದೆ,ಅದರಲ್ಲಿ 404.30 ಚದುರ ಕಿ.ಮೀ ನೀರಾವರಿ ಪ್ರದೇಶ ಇದ್ದು, ಅದರಲ್ಲಿ ವಾರ್ಷಿಕ ಒಂದಕ್ಕಿಂತ ಹೆಚ್ಚು ಬಾರಿ ಬೆಳೆಯುವ ಭೂಮಿ 851.4 ಚದುರ ಕಿ.ಮೀ ಇದೆ. ಜಿಲ್ಲೆಯಲ್ಲಿ ಕಾರಂಜಾ ನದಿಗೆ ಒಂದು ಆಣೆಕಟ್ಟು ಇದೆ. ಚುಳುಕಿನಾಲ ಹಾಗು ಮುಲ್ಲಾಮಾರಿ ನದಿಗಳಿಗೆ ಮಧ್ಯಮ ಗಾತ್ರದ ಆಣೆಕಟ್ಟುಗಳಿವೆ. ಆದರೆ ಈ ಎಲ್ಲಾ ಯೋಜನೆಗಳು ಪರಮ ಭ್ರಷ್ಟತೆಯೆಂಬ ನೀರಿನಲ್ಲಿ ಮುಳುಗಿ ಹೋಗಿವೆ!. 1963 ರಲ್ಲಿ ಆರಂಭವಾದ ಕಾರಂಜಾ ಯೋಜನೆ, 1972ರಲ್ಲಿ ಶುರುವಾದ  ಚುಳುಕಿನಾಲ ಯೋಜನೆ ಇನ್ನೂ ಪೂರ್ಣಗೊಂಡಿದೆ ಎಂದು ಹೇಳಲಿಕ್ಕೇ ಆಗದ ಪರಿಸ್ಥಿತಿ ಇದೆ. ಬಹುತೇಕ ನಾಲೆಗಳಲ್ಲಿ ನೀರಿನ ಬದಲು ಜನರ ಕಣ್ಣೀರು ಹರಿಯುತ್ತಿದೆ!. ನಾಲೆ ಹಾಗು ಕೆರೆಗಳಿಂದ ಕೇವಲ 2092 ಹೆಕ್ಟೇರ್ ಭೂಮಿ ನೀರಾವರಿ ಆಗಿದೆ ಎಂದು 1997-98ರ ಸರ್ಕಾರಿ ಅಂಕಿಅಂಶಗಳು ಹೇಳಿವೆ. 1972-74 ರಲ್ಲಿ ಭೀಕರ ಬರಗಾಲ ಈ ಜಿಲ್ಲೆಯನ್ನು ಕಾಡಿತ್ತು. ಈ ಜಿಲ್ಲೆಯ ಕಮಲನಗರ,ಕಮಠಾಣ,ಹಳ್ಳಿಖೇಡಗಳ ಹೈಡ್ರೋಗ್ರಾಫ್ ಸ್ಟೇಷನುಗಳು ಭೂಮಿಯ ಅಂತರ್ಜಲಮಟ್ಟ ಗಣನೀಯವಾಗಿ ಕುಸಿಯುತ್ತಿದೆ ಎಂದು ತಿಳಿಸಿವೆ. ಜಿಲ್ಲೆಯ ಉಷ್ಣಾಂಶ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ನಿಂದ ಗರಿಷ್ಠ 42 ಡಿಗ್ರಿ ಸೆಲ್ಸಿಯಸ್‌ನಷ್ಟು ಇದೆ.

ಮಹಾರಾಷ್ಟ್ರದಲ್ಲಿ ಪ್ರಭಾವ ಶಾಲಿಯಾಗಿದ್ದ ದಲಿತ್‌ಪ್ಯಾಂಥರ್ ಚಳವಳಿಯ ಪ್ರಭಾವ ಈ ಜಿಲ್ಲೆಯ ಮೇಲೆ ಇತ್ತು. ದಲಿತರು ಹಾಗು ಮುಸ್ಲಿಮರು ಹೆಚ್ಚಿನ ಪ್ರಮಾಣದಲ್ಲಿರುವ ಈ ಜಿಲ್ಲೆ ದಲಿತ ಚಳುವಳಿಗೆ ಹೆಸರಾಗಿತ್ತಾದರೂ ಇಂದು ಅದು ಇಲ್ಲ ಎನ್ನೋ ಮಟ್ಟಕ್ಕೆ ಇದೆ.ದಲಿತರ ಸಂಖ್ಯೆ 2001ರ ಒಂದು ಅಂದಾಜಿನ ಪ್ರಕಾರ 2,98,812 ರಷ್ಟಿದೆ. 2002 ರಲ್ಲಿ ಹೊರಬಂದ ಲಾಂಗ್ವೇಜಸ್ ಇನ್ ಇಂಡಿಯಾ ಎಂಬ ಅದ್ಯಯನ ವರದಿಯಲ್ಲಿ ಎ.ಆರ್. ಫತೀಹಿ ಅವರ ಪ್ರಕಾರ ಮುಸ್ಲಿಮರ ಸಂಖ್ಯೆ ಇಲ್ಲಿ 2.5 ಲಕ್ಷದಷ್ಟಿದೆ.ಈ ಅಂದಾಜು 1991ರ ಜನಗಣತಿಯನ್ನು ಆಧರಿಸಿದೆ. ಎಸ್.ಟಿ(ಪರಿಶಿಷ್ಟ ವರ್ಗ) ಸಮುದಾಯ 2001ರ ಒಂದು ಅಂದಾಜಿನ ಪ್ರಕಾರ ಇಲ್ಲಿ 1,88,819 ರಷ್ಟಿದೆ.

2001 ರ ಒಂದು ಅಂದಾಜಿನ ಪ್ರಕಾರ ಒಟ್ಟು 429 ಪ್ರಾಥಮಿಕ ಶಾಲೆಗಳಲ್ಲಿ ಏಕಶಿಕ್ಷಕ ಶಾಲೆಗಳು 44, ಶಿಕ್ಷಕರೇ ಇಲ್ಲದ ಶಾಲೆಗಳು 12, ಕೇವಲ ಇಬ್ಬರೇ ಶಿಕ್ಷಕರಿರುವ ಶಾಲೆಗಳು 123 ಇವೆ. ಆದರೆ ಈ ಮಾಹಿತಿ ಇಲ್ಲಿನ ಶಿಕ್ಷಣದ ವಸ್ತುಸ್ಥಿತಿಯನ್ನು ಸರಿಯಾಗಿ ಹೇಳುತ್ತಿವೆ ಎನ್ನಲು ಸಾಧ್ಯ ಇಲ್ಲ.ಯಾಕೆಂದರೆ ಅದು ಇನ್ನೂ ಕೆಟ್ಟದಾಗಿದೆ. ಇನ್ನು ಶಾಲಾ ಕಟ್ಟಡ, ಶೈಕ್ಷಣಿಕ ಸೌಲಭ್ಯಗಳ ಕತೆ ಹೇಳುವುದೇ ಬೇಡ. ಕಟ್ಟಡಗಳೇ ಇಲ್ಲದ ಕೇವಲ ಬೋರ್ಡು ಮಾತ್ರ ಇರುವ, ಶಿಕ್ಷಕ/ಫ್ರಾಧ್ಯಾಪಕರಿಂದ ಸಹಿ ಹಾಕಿಸಿಕೊಂಡು ಅವರ ಸಂಬಳಗಳನ್ನೇ ನುಂಗುವ, ಸಂಬಳದ ಕಾಲು ಬಾಗ ಮಾತ್ರ ಕೊಡುವ, ಸರ್ಕಾರಿ ಅನುದಾನವನ್ನು ಪೂರ್ತಿಯಾಗಿ ನುಂಗುವ ಶಿಕ್ಷಣ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿವೆ. ಶಾಲಾ ಕಾಲೇಜುಗಳ ಪರೀಕ್ಷೆಗಳ ಸಮಯದಲ್ಲಿ ದೊಡ್ಡ ಜಾತ್ರೆಯೇ ಪರೀಕ್ಷಾ ಕೇಂದ್ರಗಳ ಸುತ್ತ ಕಾಪಿ ಮಾಡಲು ಹಾಗು ಮಾಡಿಸಲು ನೆರೆದಿರುತ್ತದೆ. ಇದರಲ್ಲಿ ಕುಟುಂಬದ ಸದಸ್ಯರು ಬಂದು ಬಳಗ,ಶಾಲಾ ಕಾಲೇಜುಗಳ ಆಡಳಿತ ಮಂಡಳಿ ಕೂಡ ಎಲ್ಲಾ ಕೆಲಸ ಬಿಟ್ಟು ಬಂದಿರುತ್ತಾರೆ. ಶಿಕ್ಷಕರು/ಪ್ರಾಧ್ಯಾಪಕರು ನೇರವಾಗಿ ಕಾಪಿ ಮಾಡಿಸಲು, ತಮ್ಮ ವಿಷಯಗಳು/ ಸಂಸ್ಥೆಗಳಿಗೆ ಹೆಚ್ಚು ಪಲಿತಾಂಶ ತರಲು ಶ್ರಮಿಸುತ್ತಾರೆ!?. ಇತ್ತೀಚೆಗೆ ಒಂದು ಮಟ್ಟಕ್ಕೆ ಈ ಸಾಮೂಹಿಕ ಕಾಪಿಯ ನಿಯಂತ್ರಣ ಮಾಡುವ ಕಾರ್ಯ ಆಗುತ್ತಿದೆ. ಆದರೆ ಸಮಸ್ಯೆಯ ಮೂಲವನ್ನು ಸರಿಪಡಿಸುವ ಕೆಲಸ ನಡೆಯುತ್ತಿಲ್ಲ!.ಹೀಗಿದ್ದರೂ ಬೀದರ ತಾಲೂಕಿನ ಸಾಕ್ಷರತಾ ಪ್ರಮಾಣ 37% ಎಂದು, ಬೀದರ ನಗರದ ಸಾಕ್ಷರತಾ ಪ್ರಮಾಣ 60% ಎಂದು ಸರ್ಕಾರಿ ಅಂಕಿ ಅಂಶಗಳು ಹೇಳುತ್ತವೆ!?. ಆದರೆ ಎಸ್,ಎಸ್,ಎಲ್,ಸಿ ಹಾಗು ಪಿ,ಯು,ಸಿ ಮೊದಲಾದ ನಿರ್ಣಾಯಕ ಹಂತಗಳ ಪರೀಕ್ಷೆಗಳಲ್ಲಿ ಬೀದರ ಕೊನೆಯ ಸ್ಥಾನದಲ್ಲಿ ನಿಲ್ಲುತ್ತದೆ!.

ಇಲ್ಲಿ ಸರ್ಕಾರಿ ಪಶುವೈದ್ಯ ಹಾಗು ಮೀನುಗಾರಿಕಾ ಕಾಲೇಜು, ಖಾಸಗಿ ಇಂಜಿನಿಯರಿಂಗ್ ಹಾಗು ದಂತ ವೈದ್ಯಕೀಯ ಕಾಲೇಜುಗಳು ಇದ್ದರೂ ಅವುಗಳು ಜಿಲ್ಲೆಯ ಬಹುತೇಕ ವಿದ್ಯಾರ್ಥಿಗಳಿಗೆ ಮರೀಚಿಕೆಯಾಗಿದೆ. 2-3 ವರ್ಷಗಳ ಹಿಂದೆ ಸರ್ಕಾರಿ ವೈದ್ಯಕೀಯ ಕಾಲೇಜು ಬಂದಿದ್ದರೂ ಅದೇ ಕತೆಯಾಗಿದೆ.

ಜಿಲ್ಲೆಯ ಮಹಿಳೆಯರ ಸಂಖ್ಯೆ ಪುರುಷರ ಸಂಖ್ಯೆಗಿಂತ ಸುಮಾರು 40,324 ರಷ್ಟು ಕಡಿಮೆ ಇದೆ. ಪ್ರಸವದ ಸಮಯದಲ್ಲಿ ಸರಿಯಾದ ವೈದ್ಯಕೀಯ ಆರೈಕೆ ಇಲ್ಲದೆ ಮರಣ ಹೊಂದುವ ಮಹಿಳೆಯರ ಸಂಖ್ಯೆ ಹೆಚ್ಚು ಇವೆ. ಇಲ್ಲಿನ ನಗರ ಪ್ರದೇಶಗಳಲ್ಲಿ ಇಲ್ಲೀವರೆಗೂ ಒಳಚರಂಡಿಗಳಿಲ್ಲ. ನಗರ ಸಾರಿಗೆಯಲ್ಲಿ 5-6 ವರ್ಷ ಹಿಂದಿನವರೆಗೂ ಸೈಕಲ್ ರಿಕ್ಷಾಗಳೇ ಪ್ರಮುಖವಾಗಿದ್ದವು.ಈಗ ಆಟೋ ರಿಕ್ಷಾಗಳು ಆ ಜಾಗವನ್ನು ಆಕ್ರಮಿಸಿವೆ.

1993–96ರ ಸುಮಾರಿಗೆ ಕುರುಬ ಸಮುದಾಯದ ಗೊಂಡ ಸಂಘ ಅಸ್ತಿತ್ವದಲ್ಲಿತ್ತು. ಈಗ ಅದರ ಸುದ್ದಿ ಇಲ್ಲ. ದಲಿತ,ಗೊಂಡ ಸಂಘಗಳ ನಾಯಕರುಗಳು ಬಿ.ಎಸ್.ಪಿ, ಕಾಂಗ್ರೆಸ್, ಜನತಾದಳ, ಬಿ.ಜೆ.ಪಿ. ಗಳಲ್ಲಿ ಓಡಾಡುತ್ತಿದ್ದಾರೆ. ಮುಸ್ಲಿಮರ ಕೆಲವು ಸಂಘಟನೆಗಳು ಇದ್ದರೂ ಅವುಗಳು ನಿಷ್ಕ್ರೀಯತೆ ಹಾಗು ಮೂಲಭೂತವಾದಿ ಚಿಂತನೆಗಳಿಂದಾಗಿ ಕೆಲಸ ಮಾಡಲಾರದಂತಾಗಿವೆ. ರಾಷ್ಟ್ರೀಯ ಬಸವದಳ ಎಂಬ ಮಹಾದೇವಿಯನ್ನು ಮಾತೆಯನ್ನಾಗಿಸಲು ಹುಟ್ಟು ಹಾಕಿದ ಪ್ರತಿಗಾಮಿ ಸಂಘಟನೆ 1993–99ರ ವರೆಗೆ ಸಕ್ರಿಯವಾಗಿತ್ತು. ದಲಿತರಲ್ಲಿ ಒಂದು ಪಂಗಡವಾದ ಮಾದಿಗ ಸಮುದಾಯ ಬಹುತೇಕ ಕ್ರಿಶ್ಚಿಯನ್ ಧರ್ಮವನ್ನು ಅಪ್ಪಿಕೊಂಡಿದ್ದಾರೆ. ಆದರೆ ಅವರು ದಲಿತ ಕ್ರಿಶ್ಚಿಯನ್‌ರೇ ಹೊರತು ಇನ್ನೂ ಕ್ರೈಸ್ತರೆಂದು ಪರಿಗಣನೆ ಪಡೆದಿಲ್ಲ.!?

ಮುಸ್ಲಿಂ ಸಮುದಾಯದಲ್ಲಿ ಮುಖ್ಯವಾಗಿ ಚಹಾ ಅಂಗಡಿ ಇಲ್ಲವೆ ಚಹಾ ಬಂಡಿ,ಸೈಕಲ್ ರಿಪೇರಿ, ಸ್ಟೌವ್ ರಿಪೇರಿ,ಬೀಗ ರಿಪೇರಿ,ಸಣ್ಣಪಟ್ಟ ವ್ಯಾಪಾರ ಮೊದಲಾದವುಗಳಲ್ಲಿ ತೊಡಗಿಕೊಂಡಿರುವವರೇ  ಹೆಚ್ಚಾಗಿದ್ದಾರೆ. ದಲಿತ ಸಮುದಾಯ ಕೂಲಿ ಕೆಲಸ,ತಲೆಹೊರೆ ಇಲ್ಲವೆ ಬೀದಿಬದಿ ವ್ಯಾಪಾರ ಮಾಡುವುದು, ಕಟ್ಟಿಗೆ ಸಂಗ್ರಹಿಸಿ ಮಾರಾಟ ಮಾಡುವ ಕಾಯಕಗಳಲ್ಲಿರುವವರೇ ಹೆಚ್ಚಾಗಿದ್ದಾರೆ. ಮುಸ್ಲಿಮರು ನಗರ, ಪೇಟೆಗಳಲ್ಲಿ ಹೆಚ್ಚಾಗಿ ಕೇಂದ್ರೀಕರಣವಾಗಿದ್ದರೆ ದಲಿತರು ಎಲ್ಲೆಡೆಯೂ ಇದ್ದಾರೆ. ಮಲ ಹೊರುವ ಪದ್ಧತಿ ಇಲ್ಲಿ ಇನ್ನೂ ಅಸ್ತಿತ್ವದಲ್ಲಿದೆ!. ನಗರ ಸಭೆಯಲ್ಲಿ ಬೀದಿ ಕಸ ಗುಡಿಸುವ ಕೆಲಸ ಎಲ್ಲೆಡೆಗಳಂತೆ ದಲಿತರದೇ  ಆಗಿದೆ. ದಲಿತರಲ್ಲಿ ಹೆಚ್ಚಿನ ಪಾಲು ಭೂಹೀನರಾಗಿದ್ದಾರೆ. ಒಂದು ಸಣ್ಣ ಸಂಖ್ಯೆಯ ಜನರಿಗೆ ತುಂಡು ಭೂಮಿ ಇದೆ. ಅವುಗಳ ಫಲವತ್ತತೆ ಕಡಿಮೆ ಇದ್ದು ನೀರಿನ ಅನುಕೂಲ ಇರದಿರುವಂತಹವುಗಳೇ ಹೆಚ್ಚಿನದಾಗಿವೆ. ನಗರ ಪ್ರದೇಶದ ದಲಿತರಲ್ಲಿ ಒಂದು ವಿಬಾಗ ಮಧ್ಯಮ ವರ್ಗವಾಗಿದ್ದಾರೆ. ಇದರಲ್ಲಿ ಸರ್ಕಾರಿ ನೌಕರರು ರಾಜಕೀಯ ಪುಢಾರಿಗಳು ಪ್ರಧಾನವಾಗಿದ್ದಾರೆ. ಇಲ್ಲಿ ದಲಿತರಲ್ಲಿನ ಆಸ್ತಿವಂತ ವರ್ಗ ಕೂಡ ಇದೆ.  ಹಿಂದೂ  ಧರ್ಮದ ಪ್ರತಿಗಾಮಿ ಪುರೋಹಿತಶಾಹಿತನಗಳ ವಿರುದ್ಧ ನಿಂತಿದ್ಧ ಬುದ್ಧಚಿಂತನೆಯನ್ನು ಮತ್ತೊಂದು ಪುರೋಹಿತಶಾಹಿ ಧರ್ಮವನ್ನಾಗಿಸಿ ಜನರ ಮೇಲೆ ಹೇರುವಲ್ಲಿ ಈ ವರ್ಗ ಒಂದು ಪ್ರಧಾನ ಕೊಡುಗೆ ನೀಡುತ್ತಿದೆ!.  ಅಂಬೇಡ್ಕರರನ್ನು ದೇವರನ್ನಾಗಿ ಮಾಡಿ ಅಂಬೇಡ್ಕರರ ಹೋರಾಟ ಚಿಂತನೆಗಳನ್ನು ಜನರಿಂದ ದೂರ ಸರಿಸುವ ಕೆಲಸ ಮಾಡುತ್ತಿದೆ. ಅದರಲ್ಲಿ ಸರ್ಕಾರದಲ್ಲಿ ಕೆಲವು ದೊಡ್ಡ ದೊಡ್ಡ ಅಧಿಕಾರಿಗಳಾಗಿರುವವರು, ದೊಡ್ಡಮಟ್ಟದ ರಾಜಕೀಯ ಪುಢಾರಿಗಳು ಪ್ರಧಾನವಾಗಿ ಸೇರುತ್ತಾರೆ. ರಾಜ್ಯಮಟ್ಟದಲ್ಲಿ ಹಾಗು ಕೇಂದ್ರ ಮಟ್ಟದಲ್ಲಿ ಮಂತ್ರಿಗಳಾದವರು ಕೂಡ ಈ  ಜಿಲ್ಲೆಯಲ್ಲಿದ್ದಾರೆ.

ಲೀಡರಿಕೆ ಎಂಬ ಪೈರವಿ ಹಲವಾರು  ಜನ ಇಲ್ಲಿನ ಒಂದಷ್ಟು ವಿದ್ಯೆ ಕಲಿತವರ ದಿನನಿತ್ಯದ ಉದ್ಯೋಗವಾಗಿ ಬಿಟ್ಟಿದೆ. ಇದು ವಿದ್ಯಾವಂತ ದಲಿತ ಹಿಂದುಳಿದ ಯುವಕರನ್ನು ಭ್ರಷ್ಟರನ್ನಾಗಿ

ತಯಾರು ಮಾಡುವ ಒಂದು ಪ್ರಬಲ ಸಾಧನವಾಗಿ ಹೋಗಿದೆ. ಬೇರೆ ಉದ್ಯೋಗಗಳಿಲ್ಲ. ಜಿಲ್ಲೆಯ ಹಲವಾರು ಹಳ್ಳಿಗಳಲ್ಲಿ ಈಗಲೂ ದಲಿತರಿಗೆ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ನಲ್ಲಿಕಟ್ಟೆ, ಕೆರೆಗಳಿಗೆ ಪ್ರವೇಶ ಇಲ್ಲದ ವಾತಾವರಣ ಇದೆ. ಕುರುಬ ಸಮುದಾಯ ಕೂಡ ಇಲ್ಲಿ ಗಣನೀಯವಾಗಿದ್ದಾರೆ. ಇವರಲ್ಲಿ ತುಂಡು ಭೂಮಿ ಹೊಂದಿರುವವರು ಬಹಳಷ್ಟಿದ್ದಾರೆ. ಲಿಂಗಾಯತ ಸಮುದಾಯದಲ್ಲಿರುವ ಆಸ್ತಿವಂತ ವರ್ಗ ಇಲ್ಲಿನ ಬಹುತೇಕ ಭೂಮಿ ಹಾಗು ವ್ಯಾಪಾರ ವಹಿವಾಟುಗಳ ಮೇಲೆ ಹಿಡಿತ ಹೊಂದಿದ್ದಾರೆ. ರಾಜಕೀಯವಾಗಿಯೂ ಇವರುಗಳೇ ಹಿಡಿತ ಹೊಂದಿದ್ದಾರೆ. ಇದೇ ವರ್ಗ ಪ್ರತಿಗಾಮಿ ಚಿಂತನೆಗಳನ್ನು ಬಸವಣ್ಣನ ಹೆಸರಿನಲ್ಲಿ ಚಾಲ್ತಿಯಲ್ಲಿಟ್ಟು ಜನ ಸಾಮಾನ್ಯರ ಮೇಲೆ ಹೇರುತ್ತಿದೆ. ಈ ಜಿಲ್ಲೆಯ ಅಂಗವಿಕಲರ ಸಂಖ್ಯೆ 2001 ರ ಒಂದು ಅಂದಾಜಿನ ಪ್ರಕಾರ 30,224ರಷ್ಟಿದೆ.

ರಸ್ತೆಗಳೇ ಇಲ್ಲದ, ವಿದ್ಯುತ್ ಬೆಳಕು ಕಾಣದ ಹಳ್ಳಿಗಳು ಈ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿವೆ. ಇನ್ನು ಆಸ್ಪತ್ರೆ,ವೈದ್ಯಕೀಯ ಸೌಲಭ್ಯಗಳ ಕತೆ ಹೇಳುವುದೇ ಬೇಡ. ಇಲ್ಲಿನ ಕೂಲಿ ದರ ಇತರ ಎಲ್ಲಾ ಕಡೆಗಳಿಗಿಂತಲೂ ತುಂಬಾ ಕಡಿಮೆ ಇದೆ.

3 ಸಕ್ಕರೆ ಕಾರ್ಖಾನೆಗಳು ಇಲ್ಲಿವೆ. ಸಕ್ಕರೆ ಇತ್ಯಾದಿ ವಸ್ತುಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದರೂ ಆಮದು ಮಾಡಿಕೊಳ್ಳುವಂತಹ ಸರ್ಕಾರದ ನೀತಿಗಳಿಂದಾಗಿ ತೀವ್ರ ಆರ್ಥಿಕ ಸಂಕಷ್ಟಗಳಿಗೀಡಾಗಿದ್ದ ಈ ಜಿಲ್ಲೆಯ ರೈತರಲ್ಲಿ ಕಬ್ಬು ಬೆಳೆಗಾರರೇ ಪ್ರಮುಖರಾಗಿದ್ದರು. ಜಿಲ್ಲೆಯಲ್ಲಿ ಕಳೆದ ವರ್ಷ 50ಕ್ಕೂ ಹೆಚ್ಚು ರೈತರು ಸಾಲ ತೀರಿಸಲು ದಾರಿಕಾಣದೆ ಆತ್ಮಹತ್ಯೆ ಮಾಡಿಕೊಂಡಿದ್ದರು.

ಇಲ್ಲಿನ ಕೊಳಾರ ಕೈಗಾರಿಕಾ ಪ್ರದೇಶದಲ್ಲಿ ಕೆಲವು ಕೈಗಾರಿಕೆಗಳು ಇದ್ದವು. ಅವುಗಳಲ್ಲಿ ಹಲವು ಅಪಾಯಕಾರಿ ವಿಷಕಾರುವ ಪ್ರಕ್ರಿಯೆಗಳ ಬಲ್ಕ್‌ಡ್ರಗ್ ತಯಾರಿಸಿ ವಿದೇಶಕ್ಕೆ ಕಳಿಸುವ ಕಂಪನಿಗಳಾಗಿದ್ದವು. ಈಗ ಕೈಗಾರಿಕಾ ಪ್ರದೇಶದಲ್ಲಿ ಕೆಲವೇ ಕೆಲವು ಸಣ್ಣ ಕೈಗಾರಿಕೆಗಳು ಇವೆ. ಕೆಲವು ರಾಸಾಯನಿಕ ಕಾರ್ಖಾನೆಗಳು ಈಗಲೂ ಜಿಲ್ಲೆಯನ್ನು ವಿಷಮಯಗೊಳಿಸುತ್ತಿವೆ. ಇದರಿಂದ ಹಲವಾರು ಜನರು ಹಾಗು ಜಾನುವಾರುಗಳ ಪ್ರಾಣಗಳು ಹೋಗುತ್ತಿವೆ. ಇಂದಿನವರೆಗೂ ಆರ್ಥಿಕತೆ,ಕೃಷಿ, ಶಿಕ್ಷಣದಲ್ಲಿ ಅತೀ ಹಿಂದುಳಿದಿರುವಿಕೆ ಮುಂದುವರೆದಿದೆ.

ಇಲ್ಲಿ ಹೇಳಿರುವುದು ಕೇವಲ ಬೀದರ ಜಿಲ್ಲೆಯನ್ನು ಕುರಿತಾಗಿದ್ದರೂ ಈ ಪರಿಸ್ಥಿತಿಗಳು ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಅಸ್ತಿತ್ವದಲ್ಲಿವೆ. ಒಟ್ಟಾರೆಯಾಗಿ

ಕರ್ನಾಟಕದ ಅಷ್ಟೇ ಏಕೆ ದೇಶದ ಹಲವಾರು ಜಿಲ್ಲೆಗಳಲ್ಲೂ ಬೇರೆ ಬೇರೆ ಪ್ರಮಾಣದಲ್ಲಿ ಇವುಗಳು ಇವೆ. ಕೆಲವು ಕಡೆ ಕೆಲವು ಇರದೆ ಹೋಗಬಹುದು ಅಷ್ಟೆ.

೯೦ರ ದಶಕದಲ್ಲಿ ಈ ಬಾಗದಲ್ಲಿ ನಕ್ಸಲೀಯ ಚಳವಳಿ ಕಾಣಿಸಿಕೊಂಡಿತ್ತು. ಭೂಮಾಲಿಕರ ಅಧಿಕಾರ,ದರ್ಪದೌರ್ಜನ್ಯಗಳನ್ನು ಪ್ರಶ್ನಿಸಿ ನಡೆದ ಈ ಚಳವಳಿ ಮಾಜಿ ಮಂತ್ರಿ ಗುರುಪಾದಪ್ಪನಾಗಮಾರಪಲ್ಲಿಯವರನ್ನು ಕೂಡ ಮಣಿಸಿತ್ತು. ಭೂಮಾಲಿಕರ ವಶದಲ್ಲಿದ್ದ ಸಾವಿರಕ್ಕೂ ಹೆಚ್ಚು ಏಕರೆ ಸರ್ಕಾರಿ ಭೂಮಿಯನ್ನು ಜಿಲ್ಲೆಯ ಔರಾದ ತಾಲೂಕಿನ ಭೂಹೀನ ದಲಿತ ಹಿಂದುಳಿದ ಜನರಿಗೆ ನಕ್ಸಲೀಯರು ಹಂಚಿಕೆ ಮಾಡಿದ್ದರು.

1995-96ರಲ್ಲಿ ಇಲ್ಲಿ ಒಂದು ಉತ್ತಮವಾದ ಪರಿಸರ ಚಳವಳಿ ನಡೆದು ಬಲ್ಕ್ ಡ್ರಗ್ ಕಾರ್ಖಾನೆಗಳು ಬಿಡುವ ವಿಪರೀತವಾಗಿದ್ದ ವಿಷಾನಿಲ ತಾತ್ಕಾಲಿಕವಾಗಿ ಸ್ಥಗಿತವಾಗಿತ್ತು. ಕೆಲವು ಮಾರಕ ಕಂಪನಿಗಳು ಮುಚ್ಚಿಹೋದವು.ನಾಡಿನ ಹಲವು ಬುದ್ಧಿಜೀವಿಗಳು,ಸಾಹಿತಿಗಳು ಕೂಡ ಬಾಗವಹಿಸಿದ್ದ ಈ ಚಳವಳಿ ಕರ್ನಾಟಕದಾದ್ಯಂತ ಸುದ್ಧಿ ಮಾಡಿತ್ತು.

## ಧಿಢೀರ್ ಎಂದು ಬಂದಿರುವ ಅಭಿವೃದ್ಧಿ?!

ಇಂದು ಬೀದರ್ ನಗರದಲ್ಲಿ ಹಾಗು ತಾಲೂಕ ಕೇಂದ್ರಗಳಲ್ಲಿ ನೂರಾರು ಟಿನ್ ಶೀಟುಗಳ ಗುಡಿಸಲುಗಳನ್ನು, ಮನೆಗಳನ್ನು, ಚಹಾ, ತಿಂಡಿ, ತಿನಿಸು, ಇತರ ವಸ್ತುಗಳನ್ನು ಮಾರಾಟ ಮಾಡುವ ಸಣ್ಣ ಪುಟ್ಟ ಪೆಟ್ಟಿಗೆ ಅಂಗಡಿಗಳನ್ನು ಭಾರಿ ಯಂತ್ರಗಳಿಂದ ಹೂತು ಹಾಕಿ ಅವುಗಳ ಮೇಲೆ ವಿಶಾಲವಾದ ಏಕಮುಖ ರಸ್ತೆಗಳು, ಪ್ರಕಾಶಮಾನವಾದ ವಿದ್ಯುದ್ದೀಪಗಳು, ಪಾರ್ಕ್‌ಗಳು, ವಿಮಾನ ನಿಲ್ದಾಣ ತಲೆ ಎತ್ತುತ್ತಿವೆ. ಸುಸಜ್ಜಿತ ಒಳಚರಂಡಿಗಳು, ಬಸ್ ನಿಲ್ದಾಣ, ರೈಲ್ವೆ ಲೈನುಗಳ ಕೆಲಸಗಳು ಭರದಿಂದ ಸಾಗಿದೆ.

ಧಿಢೀರ್ ಎಂದು ಕಾಣುತ್ತಿರುವ ಈ ಆಭಿವೃದ್ಧಿಯೆಂಬ ಕಾರ್ಯಗಳು ಹಲವು ಜನರಲ್ಲಿ ರೋಮಾಂಚನವನ್ನು ಮೂಡಿಸಿದೆ. ಪ್ರತಿಷ್ಠಿತರ ಹಲವು ಅಕ್ರಮ ಅಂಗಡಿ, ಮುಂಗಟ್ಟು ಕಟ್ಟಡಗಳನ್ನು ಕೂಡ ತೆರವುಗೊಳಿಸಲಾಗಿದೆ. ಇದು ಜನರಿಗೆ ಬಹಳ ಖುಷಿಯ ವಿಷಯವಾಗಿದೆ. ಈಗಿನ ಜಿಲ್ಲಾಧಿಕಾರಿ ಬಹಳ ಮುತುವರ್ಜಿಯಿಂದ ಖುದ್ದಾಗಿ ನಿಂತು ಇವುಗಳನ್ನೆಲ್ಲಾ ಮಾಡಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಇಂದು ಜಿಲ್ಲಾಧಿಕಾರಿಯಷ್ಟು ಜನಪ್ರಿಯ ವ್ಯಕ್ತಿ ಮತ್ತೊಬ್ಬರಿಲ್ಲ. ನಗರದ ಜನರು ಅವರ ಬಗ್ಗೆ ಭಾರಿ ಬರವಸೆ ಹೊಂದಿದ್ದಾರೆ. ಮದ್ಯಮ ವರ್ಗವಂತೂ ಇದರಿಂದ ಬಹಳ ಉತ್ಸುಕರಾಗಿದಾರೆ.

ಬೀದರಿಗೆ ಭವ್ಯ ಬೆಳವಣಿಗೆ ಬರುತ್ತಿದೆ ಎಂಬ ನಿರೀಕ್ಷೆಯಿಂದ ನೋಡುತ್ತಿದ್ದಾರೆ. ಬೀದರಿನ ಬಹುತೇಕ ರಸ್ತೆಗಳ ಎರಡೂ ಬದಿಗಳಲ್ಲಿ ಒಡೆಯದೇ ಇರುವ ಕಟ್ಟಡಗಳೇ ಇಲ್ಲ ಎನ್ನುವಂತಿದೆ ಬೀದರಿನ ಇಂದಿನ ದೃಶ್ಯಗಳು. ಇವುಗಳನ್ನು ನೋಡುವಾಗ ಯುದ್ಧ ಪೀಡಿತ ಪ್ರದೇಶದ ನೆನಪಾಗದೇ ಇರದು. ಅಸಮರ್ಪಕ ನಗರ ಯೋಜನೆ, ಹಾಕಿಕೊಂಡ ಯೋಜನೆಯ ಅಸಮರ್ಥ/ಭ್ರಷ್ಟ ಅನುಷ್ಠಾನ, ಪುಡಾರಿಗಳ/ಪ್ರಬಾವಿಗಳ ದುರಾಸೆ, ಬಡಜನರ ಅಸಹಾಯಕತೆ ಇಂದಿನ ಈ ಪರಿಸ್ಥಿತಿಗೆ ಪ್ರಧಾನ ಕಾರಣಗಳಾಗಿವೆ..

ಇದೇ ಅಧಿಕಾರಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಕ್ರಮವಾಗಿ ಬೇಲಿಹಾಕಿಕೊಂಡ ಕಾಫಿ ಎಸ್ಟೇಟ್ ಮಾಲಿಕರಿಂದ ಭೂಮಿ ಬಿಡಿಸಿಕೊಳ್ಳಲು ಹೋದಾಗ ಕೂಡಲೇ ಸರ್ಕಾರ ವರ್ಗಾವಣೆ ಮಾಡಿತ್ತು. ದೊಡ್ಡ ಎಸ್ಟೇಟ್ ಮಾಲಿಕರ ಸಾವಿರಾರು ಏಕರೆಯಷ್ಟು ಅಕ್ರಮ ಭೂಮಿಯಲ್ಲಿ ಒಂದಿಂಚು ಕೂಡ ವಶಪಡಿಸಿಕೊಳ್ಳಲು ಅವಕಾಶ ಕೊಟ್ಟಿರಲಿಲ್ಲ.

ಆಳುವ ಬಿ.ಜೆ.ಪಿ ಪಕ್ಷದ ವಿರುದ್ದವಿದ್ದರೂ, ಕಳೆದ ಚುನಾವಣೆಯಲ್ಲಿ ಆಳುವ ಸರ್ಕಾರಕ್ಕೆ ಪರವಾಗಿ ನಿಂತಿರದಿದ್ದರೂ, ಮಾಜಿ ಮಂತ್ರಿ ಹಾಗು ಪ್ರಭಾವಿ ಕುಳ  ಗುರುಪಾದಪ್ಪ ನಾಗಮಾರಪಲ್ಲಿ ಸೇರಿದಂತೆ ಹಲವು ರಾಜಕಾರಣಿಗಳು ಈ ಅಧಿಕಾರಿಯ ಎತ್ತಂಗಡಿಗೆ ಎಲ್ಲಾ ಪ್ರಯತ್ನ ಮಾಡುತ್ತಿದ್ದರೂ ಜಿಲ್ಲಾಧಿಕಾರಿಯನ್ನು ವರ್ಗಾವಣೆ ಮಾಡಿಲ್ಲ. ಬೀದರಿಗೆ ದಾಪುಗಾಲು ಹಾಕುತ್ತಿರುವ ದೊಡ್ಡ ದೊಡ್ಡ ಕಂಪನಿಗಳ ಬಲ ಇದು ಎನ್ನಬಹುದೇನೊ !.

ಹಾಗಂತ ಹೋಬಳಿಗಳಲ್ಲಿ, ಹಳ್ಳಿಗಳಲ್ಲಿ ಆಗಬೇಕಾದ ಮೂಲಭೂತ ಅಭಿವೃದ್ಧಿ ಕಾರ್ಯಗಳು ಹಲವಾರು ವರುಷಗಳಿಂದ ಜನರು ಬೇಡಿಕೊಳ್ಳುತ್ತಿದ್ದರೂ ಈಗಲೂ ಆಗುತ್ತಿಲ್ಲ. ಕೃಷಿ, ನೀರಾವರಿ, ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಮೊದಲಾದ ರೈತರ ಬದುಕುಗಳಿಗೆ ಭರವಸೆ ಒದಗುವಂತಹ ಕೆಲಸಗಳೇನೂ ಕಾಣುತ್ತಿಲ್ಲ. ಶಿಕ್ಷಣದ ಅವಕಾಶ ಮತ್ತು ಮಟ್ಟ ಹೆಚ್ಚಿಸುವಂತಹ ಕಾರ್ಯ ಮಾಡುತ್ತಿಲ್ಲ. ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳು ದೊರೆಯುವಂತಹ    ಗ್ರಾಮೀಣ ಕೈಗಾರಿಕೆಗಳ ಬೆಳವಣಿಗೆಗೆ ಗಮನವೇ ಇಲ್ಲ. ಇರುವ ನೀರಾವರಿ ಯೋಜನೆಗಳನ್ನು ಸಮರ್ಥವಾಗಿ ಮತ್ತು ಶೀಘ್ರವಾಗಿ ಮುಗಿಸುವ ಕಾರ್ಯ ಸಹ ಸರಿಯಾಗಿ ನಡೆಯುತ್ತಿಲ್ಲ.

ಗುಡಿಸಲು, ಮನೆ,ಬದುಕಿನ ಮೂಲಗಳನ್ನು ಕಳೆದುಕೊಂಡವರು ಪರದಾಟಕ್ಕೆ ಬಿದ್ದಿದ್ದಾರೆ. ಹಲವರು ಬದಲಿ ಮೂಲವಿಲ್ಲದೆ ಹೈದರಾಬಾದ್ ಮೊದಲಾದ ನಗರಗಳಿಗೆ ವಲಸೆ ಹೋಗಿದ್ದಾರೆ. ಹೀಗೆ ಬದುಕಿನ ಮೂಲಗಳನ್ನು ಕಳೆದುಕೊಂಡ ಬಡಜನರಿಗೆ ಕಾನೂನು, ಅಕ್ರಮಗಳೆಂಬ ನೆವದಲ್ಲಿ ಪರಿಹಾರವಾಗಲಿ ಪರ್ಯಾಯವಾಗಲಿ ಸರಿಯಾಗಿ ಮಾಡಿಲ್ಲ. ಕೆಲವು ಚಿಲ್ಲರೆ ಹಣ ನೀಡಿ

ಅವರನ್ನೆಲ್ಲಾ ಒಕ್ಕಲೆಬ್ಬಿಸಲಾಗುತ್ತಿದೆ. ಕಾನೂನು ಎಂಬ ಕೊಡಲಿ ಝಳಪಿಸಿ ಈ ಬಡಜನರ ಕೊರಳುಗಳನ್ನು ಕತ್ತರಿಸಲಾಗುತ್ತಿದೆ. ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಇಲ್ಲದವರ ಅಗತ್ಯಗಳನ್ನು ಪೂರೈಸಬೇಕಾದ ಕರ್ತವ್ಯವನ್ನು ಯಾರೂ ಮಾಡುತ್ತಿಲ್ಲ.  ಈ ಬಗ್ಗೆ ದನಿ ಎತ್ತುವವರೇ ಇಲ್ಲವಾಗಿದ್ದಾರೆ. ಭಾರಿ ಅಭಿವೃದ್ಧಿಯ, ಭರವಸೆಯ ಭ್ರಮಾ ಲೋಕದೊಳಗೆ ಬಂದನಕ್ಕೊಳಗಾಗಿದ್ಧಾರೆ.

ಎಂದೂ ಕಾಣದೇ ಇದ್ದ ಈ ಎಲ್ಲಾ ಬೆಳವಣಿಗೆಗಳ ಮೂಲವನ್ನು ಕೆದಕಿ ನೋಡಿದಾಗ ಬೀದರಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯಗಳು, ಖಾಸಗಿ ವಿದ್ಯುತ್ ಯೋಜನೆಗಳು, ದೊಡ್ಡ ದೊಡ್ಡ ರೀಟೇಲ್ ( ಚಿಲ್ಲರೆ ವ್ಯಾಪಾರದ) ಮಳಿಗೆಗಳು ನಮ್ಮ ಕಣ್ಣಿಗೆ ಥಟ್ ಅಂತ ಗೋಚರಿಸುತ್ತವೆ. ಸರ್ಕಾರ ಮತ್ತು ಅಧಿಕಾರಿಗಳು ಜನರ ಪಾಲಿನ ವಿಲನ್‌ಗಳಂತೆ ಶಸ್ತ್ರ ಹಿಡಿದು ಎರಗುತ್ತಿರುವ, ಭಾರಿ ಕಾದಾಟ ಇರುವ ಭಯಾನಕ ಚಲನಚಿತ್ರಗಳ ದೃಶ್ಯಗಳು ನಮ್ಮ ಮನಃಪಟಲದಲ್ಲಿ ಮೂಡತೊಡಗುತ್ತವೆ.

ಈಗಾಗಲೇ ಘೋಷಿತವಾಗಿರುವ ವಿಶೇಷ ಆರ್ಥಿಕವಲಯಗಳಲ್ಲಿ ಸಿದ್ಧ ಉಡುಪು, ಔಷಧ ತಯಾರಿಕೆ, ಆಟೋ ಮೊಬೈಲ್ಸ್‌ಗಳು ಸೇರಿಕೊಂಡಿವೆ. ಇದಕ್ಕೆಲ್ಲಾ ತತ್‌ಕ್ಷಣ ಒಟ್ಟು 2000 ದಿಂದ 3000 ಏಕರೆಗಳಷ್ಟು ಭೂಮಿ ವಶಪಡಿಸಿಕೊಳ್ಳುವ ತಯಾರಿ ನಡೆಯುತ್ತಿದೆ. ಇದಲ್ಲದೆ ಇನ್ನೂ ಕೆಲವು ಈ ರೀತಿಯ ಯೋಜನೆಗಳು ಬರುತ್ತಿವೆ. ಭೂ ಬ್ಯಾಂಕ್ ಹುಟ್ಟು ಹಾಕುವ ಸರ್ಕಾರದ ಇತ್ತೀಚಿನ ಯೋಜನೆಗಾಗಿ 500 ಏಕರೆ ಜಮೀನು ವಶಪಡಿಸಿಕೊಳ್ಳಲಾಗುತ್ತದೆ. ಇವುಗಳಿಗೆಲ್ಲಾ ವಶಪಡಿಸಿಕೊಳ್ಳುವ ಜಮೀನು ರಸ್ತೆ, ರೈಲ್ವೆ ಹಳಿ, ವಿಮಾನನಿಲ್ದಾಣಗಳ ಸಮೀಪವೇ ಇರುತ್ತವೆ ಎಂಬುದನ್ನು ಹೇಳಬೇಕಿಲ್ಲ. ಅದರಲ್ಲಿ ಕೃಷಿಭೂಮಿ, ಜನವಸತಿ ಪ್ರದೇಶ ಕೂಡ ಇದ್ದೇ ಇರುತ್ತದೆ. ಪ್ರಸ್ತುತ ವಾಯುಪಡೆಯ ಅಧೀನದಲ್ಲಿರುವ ವಿಮಾನನಿಲ್ದಾಣವನ್ನು ವಶಪಡಿಸಿಕೊಂಡು ಅದನ್ನು ಮತ್ತಷ್ಟು ವಿಸ್ತರಿಸುವ ಯೋಜನೆಯ ಅನುಷ್ಠಾನ ಕೂಡ ನಡೆಯುತ್ತಿದೆ. ಇದುವರೆಗೂ ಕೃಷಿ ಭೂಮಿಗೆ ಇದ್ದಿದ್ದ ಕಾನೂನು ರಕ್ಷಣೆ ಸಹ ಈಗಿನ ಸರ್ಕಾರ ತೆರವುಗೊಳಿಸಿದೆ. ಹಾಗಾಗಿ ಭೂವಶಪಡಿಸುವಿಕೆಗೆ ಮತ್ತಷ್ಟು ಅನುಕೂಲ ಕಲ್ಪಿಸಿದೆ. ಹೇಗೂ ಇಂತಹ ವಲಯಗಳಲ್ಲಿ ಈ ನೆಲದ ಕಾನೂನು ಕಟ್ಟಳೆಗಳು ಅನ್ವಯವಾಗದೇ ಅಷ್ಟೂ ಪ್ರದೇಶ ಆಯಾ ಕಂಪನಿಗಳ ವಸಾಹತುಗಳಾಗುತ್ತವೆ. ಕನಿಷ್ಠ ಖರ್ಚು, ಗರಿಷ್ಠ ರಫ್ತು, ಗರಿಷ್ಠ ಲಾಭ, ಎಂಬುದೇ ವಿಶೇಷ ಆರ್ಥಿಕ ವಲಯಗಳ ಸಿದ್ಧ ಸೂತ್ರವಾಗಿದೆ. ಅವರು ನಮ್ಮ ನೆಲ, ಜಲ ಹಾಗು ಜನರನ್ನು ಇಷ್ಟ ಬಂದಂತೆ ಬಳಸಿಕೊಳ್ಳುವುದನ್ನೇ ಮಾಡುತ್ತಾರೆ. ಅವರಿಗೆ ಈ ಮಣ್ಣಿನ ಮಕ್ಕಳಿಗೆ ಇಲ್ಲದೇ ಇರುವ ಹಲವಾರು ರಿಯಾಯಿತಿಗಳು, ಕೊಡುಗೆಗಳು ಕಾನೂನಿನ ಮೂಲಕವೇ ಒದಗಿಸಲಾಗಿದೆ. ಇಲ್ಲಿ ದೊರೆಯುವ ದುಡಿಯುವ ಕೈಗಳನ್ನು ಜೀತಗಾರಿಕೆಗೆ ದೂಡಲಾಗುತ್ತದೆ. ಈ ಮಣ್ಣಿನ ಮಕ್ಕಳು ಅವುಗಳ ಮುಂದೆ

ಬಿಕ್ಷಾ ಪಾತ್ರೆ ಹಿಡಿದು ನಿಂತು ಹೋರದೂಡಿಸಿಕೊಳ್ಳಬೇಕಾಗುತ್ತದೆ. ಬೀದರಿನಂತಹ ಅತಿ ಹಿಂದುಳಿದ ಜಿಲ್ಲೆಗೆ ಇದರಿಂದಾಗುವ ಹೊಡೆತ ಭಯಂಕರವಾಗಿರುತ್ತದೆ. ಈ ಎಲ್ಲಾ ಕಾರ್ಯಗಳು ಮುಂದೆ ಉಂಟು ಮಾಡಬಹುದಾದ ಪರಿಣಾಮಗಳನ್ನು ಅವಲೋಕಿಸಿದಾಗ ಭಾರಿ ಆತಂಕ ನಮ್ಮನ್ನು ಕಾಡದೇ ಇರಲು ಸಾಧ್ಯವೇ ಇಲ್ಲ.

ಈ ರೀತಿಯ ಅಭಿವೃದ್ಧಿಯನ್ನು?! ಇಂದು ದೇಶದ ಹಲವಾರು ಕಡೆಗಳಲ್ಲಿ ಆರಂಭಿಸಲಾಗಿದೆ. ಅವುಗಳನ್ನು ವಿರೋಧಿಸಿ ಪಶ್ಚಿಮ ಬಂಗಾಲದ ನಂದಿಗ್ರಾಮ, ಸಿಂಗೂರುಗಳಂತಹ ಭಾರಿ ಹೋರಾಟಗಳೂ ಆರಂಭವಾಗಿವೆ.

ಬೀದರಿನ  ಸಂಘಟನೆಗಳು, ಬುದ್ಧಿಜೀವಿಗಳು ಈ ರೀತಿಯ ಅಭಿವೃದ್ಧಿಯ ಭ್ರಮೆಯಿಂದ ಹೊರಬರುತ್ತಾರೆಯೇ ಎಂಬುದನ್ನು ಕಾದು ನೋಡ ಬೇಕು. ಜನರು ಈ ಆಭಿವೃದ್ಧಿ ಎಂಬ ಅವನತಿಯಿಂದ ನೆಲ ಹಾಗು ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಮುಂದಾಗದಿದ್ದರೆ ಉಳಿಗಾಲ ಮಾತ್ರ  ಇರುವುದಿಲ್ಲ. ಅದೇನೆ ಇದ್ದರೂ ಜನರ ಕೈಯಲ್ಲೇ ಇದೆ.

15–ಜೂನ್,2009

---ಭರತ್ ರಾಜ್

Kumar.bharath047@gmail.com